

ದ.ರಾ. ಬೇಂದ್ರೆ ಅವರೊಂದಿಗೆ ಚೆನ್ನಣ್ಣ

ವಿಕಾಸ, ವಿವಿಧ ಪರಂಪರೆಗಳು, ಹೋರಾಟಗಳು, ಜನಾಂಗೀಯ ಸಂಘರ್ಷಗಳು ಕಿಕ್ಕಿರಿದು ತುಂಬಿವೆ. ಇದೊಂದು ಆದಿಯಿಲ್ಲದ ಅಂತ್ಯವಿಲ್ಲದ ರಚನೆ. ಸ್ಥಾಯಿಭಾವವಿಲ್ಲದ, ಅನಂತ ಸಂಚಾರಿ ಭಾವಗಳ ಕಾಡಿನಂತೆ ಬೆಳೆದುನಿಂತಿದೆ.

'ವ್ಯೋಮಾವ್ಯೋಮ' ಮಹಾಕಾವ್ಯದ ಬಿಡುಗಡೆಯ ಸಮಾರಂಭ ಕೂಡ ನನ್ನಲ್ಲಿ ವಿಚಿತ್ರ ನೆನಪಾಗಿ ಉಳಿದುಕೊಂಡಿದೆ. ಕಲಬುರಗಿಯಲ್ಲಿ ಬಿಡುಗಡೆಯ ಸಮಾರಂಭ ಆಯೋಜಿಸಲಾಗಿತ್ತು. ಈ ಮಹಾಕಾವ್ಯದ ಕುರಿತು ಮಾತನಾಡಲು ಅನೇಕರು ಬಂದಿದ್ದರು. ಲಿಂಗದೇವರು ಹಳೆಮನೆ, ನಟರಾಜ್ ಹುಳಿಯಾರ್, ಎಲ್.ಎನ್. ಮುಕುಂದರಾಜ್, ಕಾಶೀನಾಥ ಅಂಬಲಗೆ, ಮೀನಾಕ್ಷಿ ಬಾಳಿ ಮತ್ತು ನಾನು. ನನ್ನೊಬ್ಬನನ್ನು ಬಿಟ್ಟರೆ ಎಲ್ಲರೂ ಘಟಾನುಘಟಿಗಳೆ. ಆದರೆ ಅಂದು ಎಲ್ಲರೂ ಮಾತನಾಡಲು ಹೆಣಗಾಡಿದರು. ಯಾವ ಮಗ್ಗುಲಿನಿಂದ ಹೊಕ್ಕರೂ ಈ ಮಹಾಕಾವ್ಯದ ಚಕ್ರವ್ಯೂಹದಲ್ಲಿ ಪ್ರವೇಶವೇ ಸಿಗುತ್ತಿಲ್ಲ. ಒಳಗೆ ಹೋದವರು ಅಲ್ಲಿಯೇ ಹತರಾಗುತ್ತಿದ್ದರು. ಅಸಲಿಗೆ ಯಾರೂ ಪೂರ್ಣ ಓದಿಕೊಂಡು ಬಂದಿರಲಿಲ್ಲ. ಅಲ್ಲಲ್ಲಿ ಕಣ್ಣಾಡಿಸಿದರೂ ತಲೆಬುಡ ಅರ್ಥವಾಗಿರಲಿಲ್ಲ. ಅವರೆಲ್ಲರ ಗಂಟಲು ಒಣಗಿತ್ತು. ಯಾರೇನೆ ಮಾತಾಡಿದರೂ ಸಭಾಂಗಣದಲ್ಲಿ ಒಂದು ಸಣ್ಣ ಉತ್ಸಾಹವೂ ಕಾಣಿಸಲಿಲ್ಲ. ವೇದಿಕೆಯ ಮೇಲಿನ ವಿದ್ವತ್‌ಲೋಕ ಗರಬಡಿದಂತೆ ಕೂತಿತ್ತು. ಲಿಂಗದೇವರು ಹಳೆಮನೆ ಅವರು ನಿರಚನವಾದಿ ಓದಿಗೆ ಇದನ್ನು ಒಳಪಡಿಸಬಹುದೆ? ಅಂತ ಮಾತನಾಡಿದರು. ಈ ರಚನೆಯೇ ಅರ್ಥವಾಗದ ಜನರಿಗೆ ನಿರಚನೆ ಎಂಬ ಪದ ಇನ್ನೂ ಗಾಬರಿ ಹುಟ್ಟಿಸಿತ್ತು. ಮುಕುಂದರಾಜರು ಕಂಚಿನ ಕಂಠದಲ್ಲಿ ಮಹಾಕಾವ್ಯವನ್ನು ಓದಲು ಶುರುಮಾಡಿದರು. ಆದರೆ ವಿರಾಮ ಚಿಹ್ನೆ, ಪೂರ್ಣ ವಿರಾಮ ಯಾವುದೂ ಇಲ್ಲದ ಇಲ್ಲಿನ ಸಾಲುಗಳನ್ನು ಎಲ್ಲಿಂದ ಎಲ್ಲಿಯವರೆಗೆ ಓದಬೇಕೆಂಬುದನ್ನು ಅರಿಯದೆ ಗೊಂದಲಕ್ಕೊಳಗಾದರು. ನಟರಾಜ್ ಹುಳಿಯಾರ್ ಅವರು ತಾನಿನ್ನೂ ಈ ಕೃತಿಯ ಓದಿಗೆ ಸಿದ್ಧತೆ ಮಾಡಿಕೊಳ್ಳುತ್ತಿರುವುದಾಗಿ ತಿಳಿಸಿದರು. ಕಾಶೀನಾಥ ಅಂಬಲಗೆ ಅವರು ಪಂಜಾಬಿ ಕವಿತೆಗಳ ಸಾಲು ಉಲ್ಲೇಖಿಸಿ ಮಹಾಕಾವ್ಯದೆಡೆಗೆ ಸುಳಿಯದೇ ಹೋದರು. ಸದಾ ತೊಡೆ ತಟ್ಟಿಕೊಂಡು ಮಾತಾಡುತ್ತಿದ್ದ ಮೀನಾಕ್ಷಿ ಬಾಳಿ ಅವರು ಕಡಕೋಳ ಮಡಿವಾಳಪ್ಪನನ್ನು ನೆನಪಿಸಿಕೊಂಡು 'ವ್ಯೋಮಾವ್ಯೋಮ'ದ ಗಾತ್ರವನ್ನು ಮಾತ್ರ ಹೇಳಿ ವಿರಮಿಸಿದರು. ವಾಲೀಕಾರರಿಗೆ